ಆ) ಸಿಂಧಗಿ ವಿಧಾನ ಸಭಾ ಕ್ಷೇತ್ರದಲ್ಲಿ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. (ಕಲಕೇರಿ, ಹಸ್ಕಿ, ದೇವರ ಹಿಪ್ಪರಗಿ, ಕೊರವಾರ, ಚಾಂದ್‌ಕೋಟ್, ಎಂಕಂಚಿ, ಬಳಗನೂರು).

ಇ) ಸಿಂಧಗಿ ವಿಧಾನ ಸಭಾ ಕ್ಷೇತ್ರದ ಜನಸಂಖ್ಯೆ ಸುಮಾರು 2 ಲಕ್ಷ ಇದ್ದು ಏಳು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಮಾರ್ಗಸೂಚಿ ಪ್ರಕಾರ ಹೆಚ್ಚಿನ ಕೇಂದ್ರಗಳ ಸ್ಥಾಪನೆಗೆ ಅವಕಾಶವಿರುವುದಿಲ್ಲ.

1056 (1185) ಶ್ರೀ ಅಶೋಕ್ ಗುರಪ್ಪ ಶಾಬಾದಿ (ಸಿಂಧಗಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಸಿಂಧಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು);

ಆ) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಸತಿನಿಲಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ ವಸತಿನಿಲಯಗಳ ಮಂಜೂರಾತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹಾಗಿದ್ದಲ್ಲಿ ಯಾವಾಗ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಾಲಚಂದ್ರ ಲ.ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ)

ಕ್ರ. ಸಂ.	ಜಾತಿವಾರು	ವಿದ್ಯಾರ್ಥಿನಿಲಯಗಳ ಸಂಖ್ಯೆ
1.	ಪರಿಶಿಷ್ಟ ಜಾತಿ	12
2.	ಹಿಂದುಳಿದ ವರ್ಗ	10
	ಒಟ್ಟು	**22**

ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಹೌದು.

ಮುಂದಿನ ವರ್ಷಗಳಲ್ಲಿ ಆಯವ್ಯಯದ ಲಭ್ಯತೆ ಮತ್ತು ವಿದ್ಯಾರ್ಥಿನಿಲಯಗಳ ಬೇಡಿಕೆಗಳನ್ನಾಧರಿಸಿ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಪ್ರಶ್ನೆ 'ಅ' ರಲ್ಲಿ ಈಗಾಗಲೇ ಉತ್ತರ ನೀಡಲಾಗಿದೆ.

ವಿಧಾನ ಸಭೆ ಸದಸ್ಯರಾದ ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) ರವರ ಪ್ರಶ್ನೆ ಸಂಖ್ಯೆ:1185ರ ಉತ್ತರಕ್ಕೆ ಸಂಬಂಧಿಸಿದಂತೆ

ಅನುಬಂಧ-1

1. ಸಮಾಜ ಕಲ್ಯಾಣ ಇಲಾಖೆ:

ಕ್ರ. ಸಂ.	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವಿವರ	ಮಂಜೂರಾತಿ ಸಂಖ್ಯೆ
1.	ಸಿಂಧಗಿ ಪಟ್ಟಣ ಬಾಲಕರ ವಿದ್ಯಾರ್ಥಿನಿಲಯ	75
2.	ಸಿಂಧಗಿ ಪಟ್ಟಣ ಬಾಲಕಿಯರ ವಿದ್ಯಾರ್ಥಿನಿಲಯ	50
3.	ಅಸ್ಕಿ ಬಾಲಕರ ವಿದ್ಯಾರ್ಥಿನಿಲಯ	50
4.	ಬಿ.ಬಿ. ಇಂಗಳಿಗಿ ಬಾಲಕರ ವಿದ್ಯಾರ್ಥಿನಿಲಯ	50
5.	ತಲಕೇರಿ ಬಾಲಕರ ವಿದ್ಯಾರ್ಥಿನಿಲಯ	50
6.	ಹಿಟ್ನಳ್ಳಿ ಬಾಲಕರ ವಿದ್ಯಾರ್ಥಿನಿಲಯ	50
7.	ಹಿಟ್ನಳ್ಳಿ ಬಾಲಕಿಯರ ವಿದ್ಯಾರ್ಥಿನಿಲಯ	50
8.	ಮುಳಸಾವಳಗಿ ಬಾಲಕರ ವಿದ್ಯಾರ್ಥಿನಿಲಯ	50
9.	ದೇವರಹಿಪ್ಪರಗಿ ಬಾಲಕರ ವಿದ್ಯಾರ್ಥಿನಿಲಯ	50
10.	ಜಲವಾಡಿ ಬಾಲಕಿಯರ ವಿದ್ಯಾರ್ಥಿನಿಲಯ	50
	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ:	
1.	ಸಿಂಧಗಿ ಪಟ್ಟಣ ಬಾಲಕರ ವಿದ್ಯಾರ್ಥಿನಿಲಯ	150
2.	ಸಿಂಧಗಿ ಪಟ್ಟಣ ಬಾಲಕಿಯರ ವಿದ್ಯಾರ್ಥಿನಿಲಯ	150

2. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಕ್ರ. ಸಂ.	ವಿವರ	ಮಂಜೂರಾತಿ ಸಂಖ್ಯೆ
1.	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸಿಂಧಗಿ	50
2.	ಡಿ.ಟಿ. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ, ಸಿಂಧಗಿ	50
3.	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸುಂಗರಾಣ	50
4.	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಯಂಕಂಚಿ	50
5.	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಗುಬ್ಬೇವಾಡ	50
6.	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಗೊಲಗೇರಿ	50
7.	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ದೇವರಹಿಪ್ಪರಗಿ	50
8.	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಜಿಂಜಲಭಾವಿ	50
9.	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಜಾಲವಾದಿ	50
10.	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಸಿಂಧಗಿ	50

1057 (1187) ಶ್ರೀ ಅಶೋಕ್ ಗುರಪ್ಪ ಶಾಬಾದಿ (ಸಿಂಧಗಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;